ಆ) ಕೊಳ್ಳೇಗಾಲದ ಜನರಿಗೆ ಎಂದಿನಿಂದ ಕುಡಿಯುವ ನೀರನ್ನು ಒದಗಿಸಲಾಗುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಆ) ಯೋಜನೆಗೆ ದಿನಾಂಕ 23.5.2000ರಂದು ಮಂಜೂರಾತಿ ನೀಡಿದ್ದು ಕಾಮಗಾರಿಗಳನ್ನು ತೆಗೆದುಕೊಳ್ಳಲು ದಿನಾಂಕ 31.10.2000ರಂದು ಟೆಂಡರನ್ನು ಕರೆಯಲಾಗಿದೆ.

ಆ) ಡಿಸೆಂಬರ್ 2002ಕ್ಕೆ ಯೋಜನೆಯನ್ನು ಚಾಲನೆಗೊಳಿಸಿ ನೀರನ್ನು ಒದಗಿಸಲು ಯೋಜಿಸಲಾಗಿದೆ.

ಕೊಳ್ಳೇಗಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ

4768 - ಶ್ರೀ ನಂಜುಂಡ ಸ್ವಾಮಿ ಜಿ.ಎಸ್. (ಕೊಳ್ಳೆಗಾಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಪಟ್ಟಣದ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥಿತ ರೀತಿಯಲ್ಲಿ ಇಲ್ಲದೇ ಇರುವುದರಿಂದ ತಗ್ಗು ಪ್ರದೇಶದಲ್ಲಿ ಕೊಳಚೆ ನೀರು ನಿಂತು ಪಟ್ಟಣ ಪ್ರದೇಶದ ನೈರ್ಮಲ್ಯ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪಟ್ಟಣದ ನೈರ್ಮಲ್ಯ ಕಾಪಾಡಲು ಹಾಗೂ ಇಲ್ಲಿನ ಜನತೆಗೆ ಪರಿಪೂರ್ಣ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸರ್ಕಾರ ಹಮ್ಮಿಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಹೊಸ ಬಡಾವಣೆ ಹಾಗೂ ಒಳಚರಂಡಿ ಇಲ್ಲದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ೨ನೇ ಹಂತದ ಒಳಚರಂಡಿ ಯೋಜನೆಯನ್ನು ತಯಾರಿಸಬೇಕಾಗಿದೆ. ಹಾಗೂ ಹಾಲಿ ಇರುವ ಒಳಚರಂಡಿ ನೀರು ಕಾವೇರಿ ನದಿಯನ್ನು ನೇರವಾಗಿ ಸೇರುವುದನ್ನು ತಪ್ಪಿಸಲು ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ನೆರವಿನಲ್ಲಿ ರೂ. 74.48 ಲಕ್ಷ ಅಂದಾಜು ವೆಚ್ಚದಲ್ಲಿ ಒಳಚರಂಡಿ ನೀರಿನ ಇಂಟರ್‌ಸೆಕ್ಷನ್ ಮತ್ತು ಡೈವರ್ಷನ್ ಮತ್ತು ಕೊಳಚೆ ನೀರಿನ ಶುದ್ಧೀಕರಣಾಗಾರ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಕೊಳ್ಳೇಗಾಲ ಪಟ್ಟಣ ನಗರ ಸಭೆಯಾಗಿ ಪರಿವರ್ತಿಸುವುದು

4769 - ಶ್ರೀ ಜಿ.ಎಸ್. ನಂಜುಂಡಸ್ವಾಮಿ (ಕೊಳ್ಳೇಗಾಲ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಪಟ್ಟಣ ಪ್ರದೇಶದ ಜನಸಂಖ್ಯೆ 50,000 ಮೇಲ್ಪಟ್ಟಿರುವುದರಿಂದ ಇದನ್ನು ನಗರಸಭೆಯಾಗಿ ಪರಿವರ್ತಿಸಲು ಸರ್ಕಾರ ಆಲೋಚಿಸುವುದೇ?